## ಯುವಕರೇ ಏಕೆ ಐಲವ್‌ಯು ಅನ್ನುತ್ತಾರೆ?

'ನಾನು ನಿನ್ನನ್ನು ಪ್ರೀತಿಸುತ್ತೇನೆ' ಹೀಗೆಂದು ಯುವಕರೇ ಏಕೆ ಯಾವಾಗಲೂ ತಮ್ಮ ಸಖಿಯರಿಗೆ ಮೊದಲು ಹೇಳುತ್ತಾರೆ? ಎಂದಾದರೂ ಯೋಚಿಸಿದ್ದೀರಾ? ಇದಕ್ಕೆ ಕಾರಣ ಪುರುಷ ನವಿರಾದ ತನ್ನ ಪ್ರಣಯಕ್ಕೆ ಮುನ್ನುಡಿ ಬರೆಯುವ ಉದ್ದೇಶದಿಂದ 'ಐ ಲವ್ ಯು' ಎಂದು ಹೇಳಿ ತನ್ನ ರತಿಯನ್ನು ರಮಿಸುತ್ತಾನೆ ಎಂದು ಹೇಳುತ್ತದೆ ನೂತನ ಅಧ್ಯಯನ.

ಪ್ರೀತಿಯನ್ನು ಮೊದಲು ಪ್ರಕಟಿಸುವ ಅವರೇ, ಯಾವಾಗಲೂ ಪ್ರಣಯ–ಮಿಲನದ ಅಂತಿಮ ಘಟ್ಟದಲ್ಲಿ ಹೆಚ್ಚು ಸಂತೃಪ್ತರಾಗುತ್ತಾರೆ ಎಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ.

ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದ ಸಂಶೋಧಕರು, 25 ವರ್ಷ ದಾಟದ 171 ಜನರನ್ನು ಸಂದರ್ಶಿಸಿದ್ದರು. ಶೇ.87ರಷ್ಟು ಗಂಡಸರು ಬೇಗ ಪ್ರಚೋದಿತರಾಗಿ ಪ್ರೀತಿಯನ್ನು ಪ್ರಕಟಿಸುತ್ತಾರೆ. ಆದರೆ ಮಹಿಳೆಯರು ಹಾಗಲ್ಲ. ಒಬ್ಬ ಪುರುಷ ತನ್ನ ಪ್ರೀತಿಯನ್ನು ವ್ಯಕ್ತಪಡಿಸಲು 5 ವಾರಗಳ ಕಾಲ ತೆಗೆದುಕೊಂಡರೆ, ಮಹಿಳೆ 5 ತಿಂಗಳು ತೆಗೆದುಕೊಳ್ಳುತ್ತಾಳೆ ಎನ್ನುವುದು ಈ ಅಧ್ಯಯನದಿಂದ ಗೊತ್ತಾಯಿತು.

ಮತ್ತೊಂದು ಸಂಗತಿ, ಪ್ರೇಮಕ್ಕೆ ಹಸಿರು ನಿಶಾನೆ ದೊರೆತು ಒಂದು ವಾರದೊಳಗೆ ಕಾಮದ ಇಂಗಿತವನ್ನು ಗಂಡು ತೋರಿಸಿದರೆ, ಹೆಣ್ಣಿಗೆ ಹಲವು ತಿಂಗಳುಗಳೇ ಬೇಕಾಗುತ್ತವೆ ಎಂದು ಸಂಶೋಧಕರು ಹೇಳಿದ್ದಾರೆ.

ಅಮೆರಿಕಾದ ಸಂಶೋಧಕರು, ಪ್ರೀತಿ ಪ್ರಕಟಿಸುವ ತುಡಿತ ಮಹಿಳೆಯರಿಗಿಂತ ಪುರುಷರಿಗೆ ಮೂರು ಪಟ್ಟು ಹೆಚ್ಚಿದೆ ಎಂದು ಹೇಳಿದ್ದಾರೆ.

## ಬೀಪಿ ಇದೆಯಾ? ಎರಡೂ ಕೈ ಪರೀಕ್ಷಿಸಿ!



ಇರುವುದು ಒಂದೇ ಹೃದಯ. ನರ ನಾಡಿಯಲ್ಲಿ ಅದು ಹರಿಸುವ ರಕ್ತದ ತೀವ್ರತೆ ಮಾತ್ರ ಭಿನ್ನ ಎಂಬ ಹೊಸ ಸಂಗತಿಯನ್ನು ಲಂಡನ್ ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಅಂದರೆ, ರಕ್ತದ ಒತ್ತಡ (ಬೀಪಿ) ನೋಡಲು ಒಂದೇ ತೋಳನ್ನು ಪರೀಕ್ಷಿಸಲಾಗುತ್ತಿತ್ತು. ಒಂದೊಂದು ಕೈಯಲ್ಲಿಯೂ ಭಿನ್ನ ಫಲಿತಾಂಶ ಸಿಗುವ ಸಾಧ್ಯತೆ ಇದೆ. ಆದ್ದರಿಂದ ವೈದ್ಯರು ಎರಡೂ ತೋಳುಗಳನ್ನು ಪರೀಕ್ಷಿಸಬೇಕು ಎನ್ನುತ್ತಾರೆ ಅವರು.

ಈಗಾಗಲೇ ವೈದ್ಯರಿಗೆ ಎರಡು ಕೈಗಳ ರಕ್ತದ ಒತ್ತಡ ಪರೀಕ್ಷಿಸಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಸುಮಾರು ಸಂದರ್ಭದಲ್ಲಿ ವೈದ್ಯರು ಹಾಗೆ ಮಾಡುತ್ತಿಲ್ಲ. ಒಂದು ಭಾಗದ ರಕ್ತನಾಳಗಳಲ್ಲಿ ಏನಾದರೂ ತೊಂದರೆಯಾಗಿದ್ದ ಸಂದರ್ಭದಲ್ಲಿ ಆ ಭಾಗದ ತೋಳಿನ ರಕ್ತದ ಒತ್ತಡದಲ್ಲಿಯೂ ವ್ಯತ್ಯಾಸ ಇರುತ್ತದೆ. ಎರಡು ಕೈಗಳನ್ನು ಪರೀಕ್ಷಿಸುವುದರಿಂದ ರೋಗಿಯನ್ನು ಅಪಾಯದಿಂದ ಕಾಪಾಡಬಹುದು ಎಂದು ಅವರು ಹೇಳಿದ್ದಾರೆ.

## ಪಾಲಕರೆ, ಮಕ್ಕಳ ಒತ್ತಡಕ್ಕೆ ಹೆಗಲು ಕೊಡಿ!

'ಧೈರ್ಯಂ ಸರ್ವತ್ರ ಸಾಧನಂ' ಎಂದು ಹೇಳುತ್ತಾರೆ. ಮಕ್ಕಳನ್ನು ಹೆಚ್ಚು ಧೈರ್ಯಶಾಲಿಗಳನ್ನಾಗಿ ಬೆಳೆಸಬೇಕು. ಈ ನಿಟ್ಟಿನಲ್ಲಿ ಪೋಷಕರ ಕೆಲಸ ಹೆಚ್ಚು. ನಿರಂತರ ಓದಿನ ಒತ್ತಡದಿಂದ ಮಕ್ಕಳು ಕಂಗಾಲಾಗಿದ್ದ ಸಂದರ್ಭದಲ್ಲಿ ಪಾಲಕರು ಮಕ್ಕಳ ಬೆನ್ನನ್ನು ಸವರಿ 'ಹಾಗಲ್ಲ ಕಂದ; ಹೀಗೆ' ಎಂದು ಸಾಂತ್ವನದ ಪ್ರೀತಿ ತೋರಿದರೆ ಸಾಕು, ಮುಂದೆ ಅದು ಅವರ ಮೆದುಳಿನ ವಿಕಾಸಕ್ಕೆ ಕಾರಣವಾಗುತ್ತದೆ ಎನ್ನುತ್ತಾರೆ ವಾಷಿಂಗ್ಟನ್ ವಿಶ್ವವಿದ್ಯಾಲಯದ ತಜ್ಞರು.

ಮೆದುಳಿನ ನರಮಂಡಲದ ಜೀವಕೋಶದ ಮೇಲೆ ಪ್ರಭಾವ ಬೀರುವ ವಾತ್ಸಲ್ಯ ಮಕ್ಕಳ ಸ್ಮರಣ ಶಕ್ತಿಯನ್ನು ವೃದ್ಧಿಸುತ್ತದೆ. ಇದರ ಜೊತೆಗೆ ಅವರನ್ನು ಇನ್ನೂ ಭಾವ ಜೀವಿಗಳನ್ನಾಗಿ ರೂಪಿಸಲು ಸಹಾಯವಾಗುತ್ತದೆ ಎನ್ನುತ್ತದೆ ಸಂಶೋಧನಾ ತಂಡ.

ಪೂರ್ವ ಪ್ರಾಥಮಿಕ ಅಂದರೆ, ಪ್ಲೇ ಹೋಂಗೆ ಹೋಗುತ್ತಿದ್ದ 92 ಮಕ್ಕಳ ಮೇಲೆ ಅಧ್ಯಯನ ನಡೆಸಿದ ಆ ತಂಡ, ಮಕ್ಕಳ 13ನೇ ವಯಸ್ಸಿನಲ್ಲಿ ಆದ ಬದಲಾವಣೆಯನ್ನು ದಾಖಲಿಸಿದೆ. ಪಾಲಕರ ಬೆಂಬಲದಿಂದ ಬೆಳೆದ ಮಗುವಿನ ಮೆದುಳಿನ ಶಕ್ತಿ ಇತರ ಮಕ್ಕಳಿಗಿಂತ ಹೆಚ್ಚಿತ್ತು. ಪೋಷಕರ ಪ್ರೋತ್ಸಾಹದಿಂದ ವಂಚಿತವಾದ ಮಕ್ಕಳಲ್ಲಿ ಖಿನ್ನತೆ ಕಂಡು ಬಂದಿದೆ. ಆದ್ದರಿಂದ ನಿಮ್ಮ ಮಕ್ಕಳ ಒತ್ತಡವನ್ನು ತಗ್ಗಿಸಿ, ಅವರ ಮನೋವಿಕಾಸಕ್ಕೆ ನಿಮ್ಮ ವಾತ್ಸಲ್ಯದಿಂದ ನೆರವಾಗಿ ಎಂದು ಅವರು ಸಲಹೆ ನೀಡಿದ್ದಾರೆ.

–ಟಿಪ್ಸ್




